ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/53 /2023–24 ದಿನಾಂಕ: 21.06.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 12.06.2023 ರಂದು ಆನ್‌ಲೈನ್ ಪರಿಚಲನೆ ಮುಖಾಂತರ ಅನುಮೋದನೆ ಕೋರಿ ಕಳುಹಿಸಿದ ಸಿಂಡಿಕೇಟ್ ಪರಿಚಲನೆಯ ನಡವಳಿಗಳು.

****

ದಿನಾಂಕ 12.06.2023 ರಂದು ಆನ್ ಲೈನ್ ಪರಿಚಲನೆಯ ಮುಖಾಂತರ ಅನುಮೋದನೆ ಕೋರಿ ಕಳುಹಿಸಲಾಗಿದ್ದ "The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, as per the UGC Regulations-2018" ಕರಡು ಪರಿನಿಯಮಗಳ ಕಾರ್ಯಸೂಚಿಗೆ ಮಾನ್ಯ ಸಿಂಡಿಕೇಟ್ ಸದಸ್ಯರು ನೀಡಿದ ಒಪ್ಪಿಗೆಯನ್ನು ಪರಿಗಣಿಸಿ ಮಾನ್ಯ ಕುಲಪತಿಗಳು ಅನುಮೋದಿಸಿರುವ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ: ಬಿಸಿಯು/ಸಿಂಡಿಕೇಟ್–ಆನ್‌ಲೈನ್ ಪರಿಚಲನೆಯ/53/2023–24 ದಿನಾಂಕ: 21.06.2023.

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಆನ್–ಲೈನ್ ಪರಿಚಲನೆಯ ನಡವಳಿಗಳು.**

ವಿಷಯ: ಕರ್ನಾಟಕ ಸರ್ಕಾರದ ನಿರ್ದೇಶನದ ಮೇರೆಗೆ, ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 41 (2) ಅಡಿಯಲ್ಲಿ ಸಿದ್ಧಪಡಿಸಿದ "The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, as per the UGC Regulations-2018" ಎಂಬ ಕರಡು ಪರಿನಿಯಮಗಳನ್ನು ಪರಿಶೀಲಿಸಿ ಅನುಮೋದಿಸಿರುವ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸು ಪರಿಗಣಿಸುವ ಕುರಿತು.

ಉಲ್ಲೇಖ:
1. ದಿನಾಂಕ. 16.12.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಯ ನಿರ್ಣಯ
2. ವಿ.ವಿ. ಪತ್ರ ಸಂಖ್ಯೆ: ಬೆಂ.ನ.ವಿ/ಕು.ಸ.ಅ/ಬೋದಕ/ಪರಿನಿಯಮ/2022-23/951 ದಿನಾಂಕ. 16.12.2022.
3. ಅಧೀನ ಕಾರ್ಯದರ್ಶಿಗಳು, ಮಾನ್ಯ ರಾಜ್ಯಪಾಲರ ಸಚಿವಾಲಯ, ಇವರ ಪತ್ರ ಸಂಖ್ಯೆ:GS/27UNISEC/2023, ದಿನಾಂಕ. 29.03.2023
4. ಸರ್ಕಾರದ ಪತ್ರ ಸಂಖ್ಯೆ:ಇಡಿ/489/ಯುಬಿವಿ/2022, ದಿನಾಂಕ. 12.04.2023

****

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯ ಸಿದ್ಧಪಡಿಸಿದ "The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, as per the UGC Regulations-2018" ಕರಡು ಪರಿನಿಯಮಗಳನ್ನು ದಿನಾಂಕ. 16.12.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತು ಮತ್ತು ಸಿ ಸಭೆಗಳ ಅನುಮೋದನೆ ಪಡೆದು, ಉಲ್ಲೇಖ (2) ರ ಕಛೇರಿ ಪತ್ರ ಮುಖೇನ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಉಲ್ಲೇಖ (3) ಪತ್ರದಲ್ಲಿ ನೀಡಲಾಗಿರುವ ನಿರ್ದೇಶನದನುಸಾರ ಈ ಕೆಳಕಂಡ ಅಂಶಗಳನ್ನು ಕೈಬಿಡುವ ಮತ್ತು ಸೇರ್ಪಡೆ ಮಾಡುವ ಮೂಲಕ ವಿಶ್ವವಿದ್ಯಾನಿಲಯದ ಅಗತ್ಯ ಪ್ರಾಧಿಕಾರಗಳ ಅನುಮೋದನೆ ಪಡೆದು ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಉಲ್ಲೇಖಿತ (4) ರ ಪತ್ರದಲ್ಲಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ತಿಳಿಸಿರುತ್ತಾರೆ.

| | |
|---|---|
| i) | Pro-Vice-Chancellor & Vice-Chancellor ವೇತನದ ಬಗ್ಗೆ ಪರಿನಿಯಮದ 2 (V) ಅನ್ನು ಕೈಬಿಡುವುದು |
| ii) | 2.8 ಕಂಡಿಕೆ ನಂತರ 2.9 ಉಪಬಂದವನ್ನು ಈ ಕೆಳಕಂಡಂತೆ ಸೇರ್ಪಡೆಗೊಳಿಸುವುದು. |
| | "2.9:- The pay and pension of the teachers and other academic staff of the University shall be governed and regulated by the Karnataka Regulation of Pay and Pension of Teachers in Higher Educational Institutions Act, 2020" |

ಉಲ್ಲೇಖ (4) ರ ಸರ್ಕಾರದ ಪತ್ರದ ಸೂಚನೆಯಂತೆ ಅಗತ್ಯ ಬದಲಾವಣೆಗಳನ್ನು ಮಾಡಿ ವಿಷಯ ಜೂರೂರಾಗಿರುವುದರಿಂದ ಪ್ರಾಧಿಕಾರಗಳ ಕಾರ್ಯಕಲಾಪಗಳ ಪರಿನಿಯಮ ನಿಯಮ ಸಂಖ್ಯೆ 4.27 ರ ಪ್ರಕಾರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಿಗೆ ಆನ್ ಲೈನ್ ಪರಿಚಲನೆ (By Online Circulation) ಮುಖಾಂತರ ಪರಿಶೀಲನೆ ಹಾಗೂ ಅನುಮೋದನೆಗಾಗಿ ಕಳುಹಿಸಲಾಗಿತ್ತು. ಮಾನ್ಯ ವಿದ್ಯಾವಿಷಯಕ ಪರಿಷತ್ತಿನ 21 ಸದಸ್ಯರು ಮೇಲೆ ತಿಳಿಸಿದ ಪರಿನಿಯಮಗಳಿಗೆ ಇ–ಮೇಲ್ ಮುಖಾಂತರ ತಮ್ಮ ಅನುಮೋದನೆಯನ್ನು ವ್ಯಕ್ತಪಡಿಸಿದ್ದಾರೆ.

ವಿದ್ಯಾವಿಷಯಕ ಪರಿಷತ್ತು ಅನುಮೋದಿಸಿದ "The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, as per the UGC Regulations-2018" ಪರಿನಿಯಮಗಳನ್ನು ಪ್ರಾಧಿಕಾರಗಳ ಕಾರ್ಯಕಲಾಪಗಳ ಪರಿನಿಯಮ 5.17 ಪ್ರಕಾರ ಆನ್‌ಲೈನ್ ಪರಿಚಲನೆ ಮುಖಾಂತರ ಅನುಮೋದನೆ ಕೋರಿ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ.

## ಸಿಂಡಿಕೇಟ್ ಸಭೆ ನಿರ್ಣಯ

ಇ–ಮೇಲ್ ಪರಿಚಲನೆ ಮುಖಾಂತರ ಅನುಮೋದನೆ ಕೋರಿ ಕಳುಹಿಸಲಾದ ಪರಿನಿಯಮಗಳಿಗೆ 08 ಸದಸ್ಯರು ಬಹುಮತದ ಅನುಮೋದನೆ ನೀಡಿರುವುದನ್ನು ಪರಿಗಣಿಸಿ "The Statutes Relating to Appointment and Promotion of Teachers and Other Academic Staff and Measures for the Maintenance of Standards In Higher Education in the Bengaluru City University, as per the UGC Regulations-2018" ಪರಿನಿಯಮಗಳನ್ನು ಅನುಮೋದಿಸಲಾಗಿದೆ ಎಂದು ನಿರ್ಣಯಿಸಲಾಯಿತು.

| | |
|---|---|
| ಕುಲಸಚಿವರು | ಕುಲಪತಿಗಳು |
| ಸದಸ್ಯಕಾರ್ಯದರ್ಶಿಗಳು | ಸಭಾಧ್ಯಕ್ಷರು |